MARCH 30, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ,** ಉಪಚುನಾವಣೆ ಹಿನ್ನೆಲೆ, 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ ಶೇಕಡ 40ಕ್ಕಿಂತ ಹೆಚ್ಚು ದೈಹಿಕ, ಅಶಕ್ತತೆ ಹೊಂದಿದ, ವಿಶೇ ’ ಚೇತನರಿಗೆ, ಮನೆಯಿಂದಲೇ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದೆ. ನಾಡಿದ್ದು, ಏಪ್ರಿಲ್ 1 ಮತ್ತು 2 ರಂದು, ಅಧಿಕಾರಿಗಳ ತಂಡ, ನೋಂದಾಯಿತ ಮತದಾರರ ಮನೆಗೆ ಭೇಟಿ ನೀಡಲಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ, ಜಿ.ಎಂ.ಗಂಗಾಧರ ಸ್ವಾಮಿ ತಿಳಿಸಿದ್ದಾರೆ. ಅಂಚೆ ಮತಪತ್ರದ ಮೂಲಕ, ಮತ ಚಲಾಯಿಸಲು ಇಚ್ಛಿಸಿ, ಅರ್ಜಿ ಸಲ್ಲಿಸಿರುವ ಅರ್ಹ ಮತದಾರರ ಮನೆಗೆ, ಚುನಾವಣಾ ಸಿಬ್ಬಂದಿ, ಬೆಳಿಗ್ಗೆ 7 ರಿಂದ ಸಂಜೆ 6 ಗಂಟೆಯ ವರೆಗೆ ತೆರಳಿ, ಮತಗಳನ್ನು ಪಡೆಯಲಿದ್ದಾರೆ ಎಂದರು.

<><><>

**ಬಾಗಲಕೋಟೆ ವಿಧಾನಸಭಾ** ಕ್ಷೇತ್ರದ ಸುತಗುಂಡಾರ ಗ್ರಾಮಕ್ಕೆ ಆಗಿಮಿಸಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಇಂದು ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಅವರ ಪರವಾಗಿ ಮತಯಾಚನೆ ಮಾಡಲಿದ್ದಾರೆ. ವಿಜಯಪುರ ಜಿಲ್ಲೆ, ಆಲಮಟ್ಟಿಯ ಡ್ಯಾಂ ಸೈಟ್ ಹೆಲಿಪ್ಯಾಡ್ ಗೆ, ಬಂದಿಳಿಯಲಿರುವ ಮುಖ್ಯಮಂತ್ರಿ ಅವರು ನಾಯನೇಗಲಿ, ರಾಮಪುರ, ಬೇವೂರ ಸೇರಿದಂತೆ ಎರಡು ದಿನಗಳ ಕಾಲ, ವಿವಿಧೆಡೆ ಜರುಗುವ ಪ್ರಚಾರ ಸಭೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

**ಸಾರ್ವಜನಿಕರು, ಸ್ವಯಂ ಗಣತಿ ವೆಬ್ ಪೋರ್ಟಲ್, se.census.gov.in** ಮೂಲಕ, ತಮ್ಮ ಕುಟುಂಬದ ಸಾಮಾನ್ಯ ಮಾಹಿತಿಯನ್ನು, ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ನಾಡಿದ್ದು ಏಪ್ರಿಲ್ 1 ರಿಂದ 15ನೇ ತಾರೀಖಿನ ವರೆಗೆ, ಸ್ವಯಂ ಗಣತಿ ವೆಬ್ ಪೋರ್ಟಲ್ ಲಭ್ಯವಿದ್ದು, ಮೊಬೈಲ್, ಡೆಸ್ಕ್‌ಟಾಪ್, ಲ್ಯಾಪ್‌ಟಾಪ್ ಮೂಲಕ ನಮೂದಿಸಬಹುದು. ಸಮಯದ ಉಳಿತಾಯದ ಜೊತೆಗೆ, ನಿಖರ ಹಾಗೂ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲು ಸಹಕಾರಿಯಾಗಲಿದೆ. ಜನಗಣತಿ, ದೇಶದ ಜನಸಂಖ್ಯೆಯ ಗಣತಿಯ ಜೊತೆಗೆ, ದೇಶದ ಸಮಾಜೋ–ಆರ್ಥಿಕ ಸ್ಥಿತಿ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ದಾಖಲಿಸುವ, ವೈಜ್ಞಾನಿಕ ಪ್ರಕ್ರಿಯೆಯಾಗಿದೆ. ಭಾರತದ ಮೊದಲ ಡಿಜಿಟಲ್ ಜನಗಣತಿ ಮತ್ತು, 16ನೇ ಜನಗಣತಿ, ಏಪ್ರಿಲ್ ನಿಂದ 2 ಹಂತದಲ್ಲಿ ಆರಂಭಗೊಳ್ಳಲಿದೆ.

<><><>

**ಇಂದು, ಭಗವಾನ್ ಶ್ರೀ ಮಹಾವೀರ** ಜಯಂತಿ ಹಿನ್ನೆಲೆ, ಗಣ್ಯರು ನಾಡಿನ ಜನತೆಗೆ ಶುಭಾಶಯಗಳನ್ನು ಕೋರಿದ್ದಾರೆ. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವರಾದ ಈಶ್ವರ ಖಂಡ್ರೆ ತಮ್ಮ ಎಕ್ಸ್ ಖಾತೆ ಮೂಲಕ, ಮಹಾವೀರ ಜಯಂತಿ ಶುಭಾಶಯಗಳನ್ನು ತಿಳಿಸಿದ್ದು, 'ಅಹಿಂಸೆ, ಸತ್ಯ ಮತ್ತು ತ್ಯಾಗದ ಮಾರ್ಗವನ್ನು ತೋರಿದ ಭಗವಾನ್ ಮಹಾವೀರರ ಆದರ್ಶಗಳು ಎಲ್ಲರ ಜೀವನದಲ್ಲಿ ಸದಾ ಬೆಳಕಾಗಲಿ' ಎಂದಿದ್ದಾರೆ. ಸಮಾಜದಲ್ಲಿ ಶಾಂತಿ, ಸಹಿಷ್ಣುತೆ ಹಾಗೂ ಮಾನವೀಯ ಮೌಲ್ಯಗಳು ವೃದ್ಧಿಯಾಗಲಿ ಎಂದು ಹಾರೈಸಿದ್ದಾರೆ. ಭಗವಾನ್ ಮಹಾವೀರರು ಬೋಧಿಸಿದ, ಅಹಿಂಸಾ ತತ್ವ ಸಂದೇಶದ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಿರಿಯ ಸಾಹಿತಿ ಹಾಗೂ ಚಿಂತಕ ಹಾಸನದ ಜಿ. ಬಿ ಹರೀಶ. .

<><><>

**ಜಿ.ಬಿ ಹರೀಶ ಧ್ವನಿ –40 ಸೆಕೆಂದುಗಳು**

<><><>

**ಧಾರವಾಡ ಜಿಲ್ಲೆ, 18ನೇ ಕನ್ನಡ ಸಾಹಿತ್ಯ** ಸಮ್ಮೇಳನ, ಇಂದು ಮತ್ತು ನಾಳೆ, ಕರ್ನಾಟಕ ವಿದ್ಯಾವರ್ಧಕ ಸಂಘದ, ಪಾಟೀಲ ಪುಟ್ಟಪ್ಪ ಸಭಾ ಭವನದಲ್ಲಿ ಜರುಗಲಿದ್ದು, ಬೆಳಗ್ಗೆ ಧಾರವಾಡದ ಮನೋಆರೋಗ್ಯ ಹಾಗೂ ನರ ವಿಜ್ಞಾನಗಳ ಸಂಸ್ಥೆ ಆಡಳಿತಾಧಿಕಾರಿ ಸಿದ್ಧಲಿಂಗಯ್ಯ ಹಿರೇಮಠ ಚಾಲನೆ ನೀಡಿದರು. ಸಾಹಿತಿ ಹೇಮಾ ಪಟ್ಟಣಶೆಟ್ಟಿ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದು, ಕೆ.ಸಿ.ಸಿ. ಬ್ಯಾಂಕ್ ವೃತ್ತದಿಂದ, ವಿದ್ಯಾವರ್ಧಕ ಸಂಘದ ವರೆಗೆ, ಜಾನಪದ ಕಲಾತಂಡಗಳ ಮುಮ್ಮೇಳದಲ್ಲಿ, ಮೆರವಣಿಗೆ ನಡೆಯಿತು. ಪ್ರಥಮ ಗೋಷ್ಠಿ, ಮಧ್ಯಾಹ್ನ 2 ಗಂಟೆಗೆ ಆಯೋಜಿತವಾಗಿದ್ದು, ಹಿರಿಯ ವಿಜ್ಞಾನಿ, ಪ್ರೊಫೆಸರ್ ಎಸ್.ಎಂ. ಶಿವಪ್ರಸಾದ, 'ಕೃತಕ ಬುದ್ಧಿಮತ್ತೆ; ಅವಕಾಶ ಮತ್ತು ಸವಾಲು' ಕುರಿತು, ಮಾತನಾಡಲಿದ್ದಾರೆ.

<><><>

**ಆಕಾಶವಾಣಿ ಧಾರವಾಡ ಕೇಂದ್ರದ,** ಸಹಾಯಕ ನಿರ್ದೇಶಕ ಹಾಗೂ ಕಾರ್ಯಕ್ರಮ ವಿಭಾಗದ ಮುಖ್ಯಸ್ಥ, ಭಾರತೀಯ ಪ್ರಸಾರ ಸೇವೆ (ಐ.ಬಿ.ಪಿ.ಎಸ್.) ಹಿರಿಯ ಅಧಿಕಾರಿ, ಶರಣಬಸವ ಚೋಳಿನ ಅವರು, 35 ವರ್ಷಗಳ ಸುಧೀರ್ಘ ಸೇವೆಯ ಬಳಿಕ, ನಾಳೆ ಸೇವಾ ನಿವೃತ್ತಿ ಹೊಂದಲಿದ್ದು, ತನ್ನಿಮಿತ್ತ, ಆಕಾಶವಾಣಿ ಧಾರವಾಡ ಕೇಂದ್ರದ, ಆವರಣದಲ್ಲಿ ಇಂದು ಬೀಳ್ಕೊಡುಗೆ ಸಮಾರಂಭ ಆಯೋಜಿತವಾಗಿದೆ.

<><><>

**ಧಾರವಾಡದ ಹಿರಿಯ ಶೈಕ್ಷಣಿಕ ಆಡಳಿತ ತಜ್ಞ,** ಎಂ.ಪಿ. ಬಗಲಿ, ನಿನ್ನೆ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ 88 ವರ್ಷ ವಯಸ್ಸಾಗಿತ್ತು. ಕರ್ನಾಟಕ ವಿಶ್ವವಿದ್ಯಾಲಯದ, ಉಪ ಕುಲಸಚಿವರಾಗಿ, ಬೆಳಗಾವಿಯ ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಸಚಿವರಾಗಿ, ಸುತ್ತೂರು ಜೆ.ಎಸ್.ಎಸ್. ಸಂಸ್ಥೆಯ, ಧಾರವಾಡ ಘಟಕದ ಆಡಳಿತಾಧಿಕಾರಿಯಾಗಿ, ಸೇವೆ ಸಲ್ಲಿಸಿದ್ದರು. ಬೆಂಗಳೂರಿನಲ್ಲಿ, ಪಾರ್ಥಿವ ಶರೀರದ ಅಂತ್ಯಕ್ರಿಯೆ ಜರುಗಿದ್ದಾಗಿ, ಕುಟುಂಬ ತಿಳಿಸಿದೆ.

<><><>

**ಅಖಿಲ ಭಾರತ ಶರಣ ಸಾಹಿತ್ಯ** ಪರಿಷತ್ತು, ಧಾರವಾಡ ಜಿಲ್ಲಾ ಘಟಕದ ವತಿಯಿಂದ, ಇಂದು ಸಂಜೆ 4 ಗಂಟೆಗೆ, ನಗರದ ಸಾಯಿ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ, ಲಿಂಗೈಕ್ಯ ವಿರುಪಾಕ್ಷಪ್ಪ ಶಿವಯೋಗಪ್ಪ ಬಸವನಾಳ ದತ್ತಿ ಉಪನ್ಯಾಸ ಕಾರ್ಯಕ್ರಮ

ಆಯೋಜಿತವಾಗಿದೆ. 'ವಚನ ಸಾಹಿತ್ಯದಲ್ಲಿ ಸಹಕಾರ ತತ್ವ ಪ್ರತಿಪಾದನೆ' ಕುರಿತು, ಡಾಕ್ಟರ ಮೃತ್ಯುಂಜಯ ಶೆಟ್ಟರ ಉಪನ್ಯಾಸ ನೀಡಲಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>